# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1049
ಸದಸ್ಯರ ಹೆಸರು : ಡಾ|| ವೈ ಎ ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 19-12-2018
ಉತ್ತರಿಸುವ ಸಚಿವರು : ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭೂ ಸುಧಾರಣೆ ಕಾಯ್ದೆ, ಕಲಂ 79(ಎ) ಮತ್ತು (ಬಿ) ವ್ಯಾಪ್ತಿಗೆ ಬರುವವರು ಯಾರು; (ಮಾಹಿತಿ ನೀಡುವುದು) | ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಕಾಯ್ದೆ, 2015ರನ್ವಯ ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 79ಎಗೆ ತಿದ್ದುಪಡಿ ತರಲಾಗಿದೆ. ಇದರನ್ವಯ<br>1. ಕೃಷಿ ಕೃಷಿಭೂಮಿಗಳಿಂದಲ್ಲದೇ ಇತರ ಮೂಲಗಳಿಂದ ರೂ.25.00 ಲಕ್ಷಗಳಿಗೆ ಕಡಿಮೆಇಲ್ಲದಷ್ಟು ಆದಾಯವಿರುವ ಯಾವುದೇ ವ್ಯಕ್ತಿ ಅಥವಾ ಕುಟುಂಬ ಅಥವಾ ಅವಿಭಕ್ತ ಕುಟುಂಬ ಕರ್ನಾಟಕ ಭೂ ಸುಧಾರಣೆ ಕಾಯ್ದೆ, ಕಲಂ 79(ಎ) ವ್ಯಾಪ್ತಿಗೆ ಬರುತ್ತಾರೆ.<br>2. ಯಾವುದೇ ಒಬ್ಬ ವ್ಯಕ್ತಿ ಅಥವಾ ಕುಟುಂಬ ಅಥವಾ ಅವಿಭಕ್ತ ಕುಟುಂಬವು ಯಾವುದೇ ನಿಗಧಿತ ದಿನದಿಂದ ಹಿಂದಿನ ಸತತ 5 ವರ್ಷಗಳವರೆಗೆ ರೂ.25.00 ಲಕ್ಷಕ್ಕಿಂತ ಹೆಚ್ಚಿನ ಸರಾಸರಿ ವಾರ್ಷಿಕ ಆದಾಯ ಹೊಂದಿರುವವರು ಕರ್ನಾಟಕ ಭೂ ಸುಧಾರಣೆ ಕಾಯ್ದೆ, ಕಲಂ 79(ಎ) ವ್ಯಾಪ್ತಿಗೆ ಬರುತ್ತಾರೆ.<br><br>ಕರ್ನಾಟಕ ಭೂ ಸುಧಾರಣಾ ಕಾಯ್ದೆ, ಕಲಂ79(ಬಿ)ರಡಿಯಲ್ಲಿ ಭೂಮಿಯನ್ನು ಸ್ವಂತ ಸಾಗುವಳಿ ಮಾಡುತ್ತಿರುವ ವ್ಯಕ್ತಿಯಲ್ಲದ ಇತರೆ ಯಾರೇ ವ್ಯಕ್ತಿಗೆ ಭೂಮಿಯನ್ನು ಧಾರಣ ಮಾಡಲು ಹಕ್ಕಿರತಕ್ಕದಲ್ಲ.<br><br>ಯಾವುದೇ ಭೂಮಿಯನ್ನು-<br>i) ಸ್ವತ್ತನ್ನು ಧಾರಣ ಮಾಡಲು ಸಾಮರ್ಥ್ಯವುಳ್ಳ 63ನೇ ಪ್ರಕರಣದ(7)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಸಂಸ್ಥೆಯಲ್ಲದ ಅಥವಾ ಸಂಘವಲ್ಲದ ಅಥವಾ ಟ್ರಸ್ಟ್ ಅಲ್ಲದ, ಶೈಕ್ಷಣಿಕ, ಧಾರ್ಮಿಕ ಅಥವಾ ಧರ್ಮದಾಯ ಸಂಸ್ಥೆಯು ಅಥವಾ ಸಂಘವು ಅಥವಾ ಟ್ರಸ್ಟ್:<br>ii) ಕಂಪನಿಯು;<br>iii) ಅವಿಭಕ್ತ ಕುಟುಂಬ ಅಲ್ಲದ, ನಿಗಮಿತವಾಗಿರಲಿ ಅಥವಾ ಆಗಿರದಿರಲಿ, ವ್ಯಕ್ತಿಗಳ ಸಂಘವು ಅಥವಾ ಇತರ ನಿಕಾಯವು; ಅಥವಾ<br>iv) ಸಹಕಾರ ಕೃಷಿ ಕ್ಷೇತ್ರವಲ್ಲದ ಸಹಕಾರ ಸಂಘವು,<br>– ಧಾರಣ ಮಾಡುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ. |
| ಆ) | ಕಲಂ 79(ಬಿ) ವ್ಯಾಪ್ತಿಗೆ ನಿಗದಿಪಡಿಸಿರುವ ಆದಾಯವೆಷ್ಟು; (ಆದೇಶದ ಪ್ರತಿ ನೀಡುವುದು) | ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 79(ಬಿ)ಗೆ ಆದಾಯ ಮಿತಿ ಒಳಪಡುವುದಿಲ್ಲ. ಆದರೆ ಸದರಿ ಕಾಯ್ದೆ, 79(ಎ)ಗೆ ಆದಾಯಮಿತಿ ಅನ್ವಯಿಸುತ್ತಿದ್ದು, ಸರ್ಕಾರಿ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 21 ಶಾಸನ 2015 ದಿನಾಂಕ:13-08-2015 ರಲ್ಲಿ ವಾರ್ಷಿಕ ಆದಾಯದ ಮಿತಿಯನ್ನು ರೂ 25,00,000/- ನಿಗದಿಗೊಳಿಸಲಾಗಿದೆ. |

| | | |
|---|---|---|
| ಇ) | ಕಲಂ 79(ಬಿ) ಅಡಿಯಲ್ಲಿ ಜಮೀನು ಪಡೆಯಲು ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗಳೆಷ್ಟು; ವಿಲೆ ಮತ್ತು ಬಾಕಿ ಅರ್ಜಿಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಕಲಂ 79(ಬಿ)ರಡಿಯಲ್ಲಿ ಜಮೀನು ಪಡೆಯಲು ಕಲಂ 80ರಡಿ ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧ**-1 ರಲ್ಲಿ ನೀಡಲಾಗಿದೆ. |
| ಈ) | ಕರ್ನಾಟಕ ರಾಜ್ಯದವರಲ್ಲದೆ ಹೊರ ರಾಜ್ಯದವರು ಈ ಕಲಂ ಅಡಿಯಲ್ಲಿ ಭೂಮಿ ಖರೀದಿಸಲು ಸಲ್ಲಿಸಿರುವ ಅರ್ಜಿಗಳೆಷ್ಟು; | ಪ್ರಾದೇಶಿಕ ಆಯುಕ್ತರ ವರದಿಯನ್ವಯ ಇಂತಹ ಯಾವುದೇ ಪ್ರಕರಣಗಳು ಕಂಡು ಬರುವುದಿಲ್ಲ. |
| ಉ) | ಕಲಂ 79(ಬಿ) ಅಡಿಯಲ್ಲಿ ಜಮೀನುಗಳನ್ನು ಪಡೆಯಲು ಅನುಮತಿ ಪಡೆಯದೆ ಜಮೀನು ಕ್ರಯಕ್ಕೆ ಪಡೆದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ತೆಗೆದುಕೊಂಡ ಕ್ರಮವೇನು; ಹಾಗೂ ಈ ಸಂಬಂಧ ಸರ್ಕಾರ ಸ್ವಾಧೀನಕ್ಕೆ ಪಡೆದುಕೊಂಡ ಜಮೀನುಗಳ ವಿಸ್ತೀರ್ಣ ಎಷ್ಟು? | ಬಂದಿದೆ.<br>ಸ್ವೀಕೃತವಾದ ಅರ್ಜಿಗಳ ಬಗ್ಗೆ ವಿಚಾರಣೆ ಮಾಡಿ ಕಲಂ-79(ಬಿ)ಗೆ ಸಂಬಂಧಿಸಿದಂತೆ, ಪೂರಕ ದಾಖಲೆಗಳನ್ನು ನೀಡದ ಪ್ರಕರಣಗಳ ಜಮೀನುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುತ್ತಿದೆ.<br>ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79(ಬಿ)ರನ್ವಯ ಉಲ್ಲಂಘನೆಯಾದ ಪ್ರಕರಣಗಳಲ್ಲಿ ಒಟ್ಟು 8108.37 ಎಕರೆ ವಿಸ್ತೀರ್ಣದ ಜಮೀನುಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ.<br>ವಿವರಗಳನ್ನು ಅನುಬಂಧ -2ರಲ್ಲಿ ನೀಡಲಾಗಿದೆ. |

ಸಂಖ್ಯೆ: ಕಂಇ 23 ಎಲ್‌ಆರ್‌ಎಸ್ 2018

(ಆರ್.ವಿ. ದೇಶಪಾಂಡೆ)
ಕಂದಾಯ ಹಾಗೂ ಕೌಶಲ್ಯ ಅಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1049ಗೆ ಅನುಬಂಧ-1

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79(ಬಿ)ರಡಿಯಲ್ಲಿ ಜಮೀನು ಪಡೆಯಲು ಕಲಂ 80ರಡಿ ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗಳ ಜಿಲ್ಲಾವಾರು ವಿವರ:

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಸಲ್ಲಿಸಿರುವ ಅರ್ಜಿಗಳ ಸಂಖ್ಯೆ | ವಿಲೇ | ಬಾಕಿ |
|---|---|---|---|---|
| | ಬೆಂಗಳೂರು ವಿಭಾಗ | | | |
| 01 | ಬೆಂಗಳೂರು ನಗರ | 03 | 01 | 02 |
| 02 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 06 | 04 | 02 |
| 03 | ರಾಮನಗರ | 40 | 18 | 22 |
| 04 | ಕೋಲಾರ | 03 | 03 | – |
| 05 | ತುಮಕೂರು | 12 | 08 | 04 |
| | | **64** | **34** | **30** |
| | ಕಲಬುರಗಿ ವಿಭಾಗ | | | |
| 06 | ಬಳ್ಳಾರಿ | 04 | – | 04 |
| 07 | ಬೀದರ್ | 09 | 06 | 03 |
| 08 | ಕಲಬುರಗಿ | 34 | 28 | 06 |
| 09 | ಕೊಪ್ಪಳ | 15 | 13 | 02 |
| | | **62** | **47** | **15** |
| | ಬೆಳಗಾವಿ ವಿಭಾಗ | | | |
| 10 | ಬೆಳಗಾವಿ | 257 | 257 | – |
| 11 | ಬಾಗಲಕೋಟೆ | 30 | – | 30 |
| 12 | ಗದಗ | 48 | 03 | 45 |
| 13 | ಕಾರವಾರ | 21 | 21 | – |
| | | **356** | **281** | **75** |
| | ಮೈಸೂರು ವಿಭಾಗ | | | |
| 13 | ಚಾಮರಾಜ ನಗರ | 13 | 12 | 01 |
| 14 | ಚಿಕ್ಕಮಗಳೂರು | 12 | 12 | – |
| 15 | ದಕ್ಷಿಣ ಕನ್ನಡ | 04 | 02 | 02 |
| | | **29** | **26** | **03** |
| | | **511** | **388** | **123** |

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1049ಗೆ ಅನುಬಂಧ-2

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79(ಬಿ)ರಡಿಯಲ್ಲಿ ಸರ್ಕಾರದ ಅನುಮತಿ ಪಡೆಯದ ಪ್ರಕರಣಗಳಲ್ಲಿ ಸರ್ಕಾರ ವಶಕ್ಕೆ ಪಡೆದುಕೊಂಡ ಜಮೀನುಗಳ ವಿಸ್ತೀರ್ಣದ ವಿವರ:-

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|
| 01 | ಬೆಂಗಳೂರು ಗ್ರಾಮಾಂತರ | 3236.07 |
| 02 | ರಾಮನಗರ | 805.09 |
| 03 | ಕೋಲಾರ | 298.26 |
| 04 | ಕಲಬುರಗಿ | 1779.22 |
| 05 | ಬೀದರ್ | 71.30 |
| 06 | ಯಾದಗಿರಿ | 1.00 |
| 07 | ರಾಯಚೂರು | 24.38 |
| 08 | ಬಳ್ಳಾರಿ | 77.10 |
| 09 | ಚಾಮರಾಜನಗರ | 1741.20 |
| 10 | ಚಿಕ್ಕಮಗಳೂರು | 24.10 |
| 11 | ದಕ್ಷಿಣ ಕನ್ನಡ | 27.25 |
| 12 | ಕೊಡಗು | 21.00 |
| | ಒಟ್ಟು | **8108.37** |